# ಶಿಮೊ ಪೆಕ್ಸ್

ಇಂದಿನ ವಿದ್ಯುನ್ಮಾನ ಯುಗದಲ್ಲಿ ಕ್ರಾಂತಿಕಾರಕ ಆವಿಷ್ಕಾರಗಳಾಗಿದ್ದರೂ, ಸಂಪರ್ಕ ಮತ್ತು ಸಂವಹನ ಕ್ಷೇತ್ರದ ಆಧಾರಸ್ತಂಭ ಅಂಚೆ ಇಲಾಖೆ. ಅದರ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಇಂದಿಗೂ ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡಿದೆ. ಸುದೀರ್ಘ ಇತಿಹಾಸ ಹೊಂದಿರುವ ಅಂಚೆಚೀಟಿಗಳ ಪ್ರಾಮುಖ್ಯತೆಯನ್ನು ಸಾರುವ 'ಶಿಮೊ ಪೆಕ್ಸ್' (Shimoga Philately Exhibition) ಪ್ರದರ್ಶನವನ್ನು ಶಿವಮೊಗ್ಗ ವಿಭಾಗೀಯ ಅಂಚೆ ಇಲಾಖೆ ಆಯೋಜಿಸಿತ್ತು. ದೇಶ–ವಿದೇಶದ ವಿವಿಧ ಪಕ್ಷಿಗಳು, ಪ್ರಾಣಿಗಳು, ವಿಶ್ವನಾಯಕರು, ಕ್ರೀಡಾಪಟುಗಳು, ಖ್ಯಾತ ಗಾಯಕರು, ನಟರು, ಸ್ಮಾರಕಗಳ ಹಾಗೂ ಮುಂತಾದವುಗಳ ಅಂಚೆ ಚೀಟಿಗಳನ್ನು ಮತ್ತು ಸ್ಥಳೀಯ ಮಹತ್ವದ ಕ್ಷೇತ್ರಗಳು, ವಿಶೇಷ ಸಂದರ್ಭಗಳ ಲಕೋಟೆಗಳನ್ನು ಸಿದ್ಧಪಡಿಸಿ ಪ್ರದರ್ಶಿಸಿರುವುದರ ಜೊತೆಯಲ್ಲಿ ಅಂಚೆ ಇಲಾಖೆಗೆ ಸಂಬಂಧಿಸಿದ ಐತಿಹಾಸಿಕ ಘಟ್ಟಗಳ ಸಮಗ್ರ ಚಿತ್ರಣವನ್ನು ಪ್ರದರ್ಶನದಲ್ಲಿ ತೆರೆದಿಡಲಾಗಿತ್ತು. ವೀಕ್ಷಕರನ್ನು ಯಾಂತ್ರಿಕ ವೀಕ್ಷಣೆಗೆ ಸೀಮಿತಗೊಳಿಸದೇ ಸಂಘಟಕರು ಕೇಳುವ ಅಂಚೆ ಚೀಟಿಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸುವ ಹೊಣೆಯನ್ನು ಆಯೋಜಕರು ಕಲ್ಪಿಸಿರುವುದು ವಿಭಿನ್ನವಾಗಿತ್ತು. ಇಲಾಖೆ ಸಾಗಿ ಬಂದ ದಾರಿಯ ಬಗ್ಗೆ ಸಾರ್ವಜನಿಕರಿಗೆ ಸಾಕಷ್ಟು ಮಾಹಿತಿ ಲಭ್ಯವಾಯಿತು. ಪ್ರದರ್ಶನ ಆಯೋಜಿಸಿದ್ದ ಇಲಾಖೆಯ ಕಾರ್ಯ ಸ್ತುತ್ಯರ್ಹ.

■ **ಕೆ. ರಾಮಕೃಷ್ಣ, ಸೀಬಿನಕೆರೆ ಗುಡ್ಡ**






# ಪುರಾತನ ಶಿವಲಿಂಗ

ರಾಯಚೂರಿನ ಮಾನ್ವಿ ತಾಲ್ಲೂಕಿನ ನುಗಡೋಣಿ ಗ್ರಾಮದ ರೈತ ಮಹಾದೇವಪ್ಪ ಅವರು, ತನ್ನ ಹೊಲದಲ್ಲಿ ಕೃಷಿ ಚಟುವಟಿಕೆಗಾಗಿ ಟ್ರಾಕ್ಟರ್ ಮೂಲಕ ಭೂಮಿ ಉಳುಮೆ ಮಾಡುವಾಗ ಈ ಶಿವಲಿಂಗ ಪತ್ತೆಯಾಗಿದೆ. ಇದು ಪುರಾತನ ಶಿವಲಿಂಗ ಆಗಿದ್ದು, ಗ್ರಾಮದ ಬಸವೇಶ್ವರ ದೇಗುಲದಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಲಿಂಗಕ್ಕೆ ಗ್ರಾಮಸ್ಥರು ನಿತ್ಯವೂ ಪೂಜೆ, ಪುನಸ್ಕಾರ ಮಾಡುತ್ತಾರೆ.

■ **ಈರಣ್ಣ ಬೆಂಗಾಲಿ, ರಾಯಚೂರು**

# ರೋಮನ್ ಬಾತ್

ಯುರೋಪಿನ ಬಾತ್ ಎಂಬಲ್ಲಿರುವ ಅತ್ಯಂತ ಪುರಾತನವಾದ ಈ ರೋಮನ್ ಬಾತ್ ಅನ್ನು ರೋಮನ್ನರು ಕ್ರಿ.ಶ. ಒಂದನೇ ಶತಮಾನದಲ್ಲಿ ಕಟ್ಟಿದರು ಎಂಬುದು ಇತಿಹಾಸ. ಅಲ್ಲಿರುವ ಬಿಸಿ ನೀರಿನ ಬುಗ್ಗೆ ಅನೇಕ ರೋಗಗಳ ನಿವಾರಕ ಶಕ್ತಿ ಹೊಂದಿದೆ ಎಂಬ ಮಾತೂ ಇದೆ. ಸುಲಿಸ್ ಮಿನರ್ವಾ ಎಂಬ ದೇವತೆಯನ್ನು ಪೂಜಿಸುತ್ತಿದ್ದ ಈ ಕಟ್ಟಡದಲ್ಲಿ ಅನೇಕ ಸುಂದರವಾದ ಶಿಲ್ಪಕಲೆಗಳಿವೆ. ಇದು ಪ್ರವಾಸಿಗರ ಆಕರ್ಷಣೀಯ ಕೇಂದ್ರವೂ ಆಗಿದೆ.

■ **ಅರ್ಪಿತಾ ಆಚಾರ್ಯ**

